PAPERS LAID ON THE TABLE.

Statement of the Prime Minister on the formation of the Andhra State.

Sri A. G. RAMACHANDRA RAO (Minister for Law and Education).—Sir, I lay on the Table the Statement of the Prime Minister on the formation of the Andhra State. Copies of the statement will be distributed to the Members shortly.

Sri MULKA GOVINDA REDDY.—Will Wanchoo's report also be placed on the Table, Sir?

Sri A. G. RAMACHANDRA RAO.—No; only the statement of the Prime Minister.

MYSORE (PERSONAL AND MISCELLANEOUS) INAMS ABOLITION BILL, 1953.

Motion to consider—(contd.)

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸ್ವಾಮಿ, ಈ ವ ಸೂದೆಯ ಸಂಬಂಧವಾಗಿ ಈಗಾಗಲೇ ಹಲ ವಾರು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿ ಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ಮಸೂ ದೆಯ ಮೂಲ ತತ್ವಗಳಮೇಲೆ ವಿಪುಲವಾಗಿ ಚರ್ಚೆ ಗಳಾಗಿರುತ್ತವೆ. ಆ ಚರ್ಚೆಗಳಿಂದ ಒಂದು ಅಂಶ ಮಾತ್ರ ಎದ್ದುಕಾಣುತಿದೆ. ಸರ್ಕಾರದವರು ಈ ಜೋಡಿದಾರರ ಮತ್ತು ಇನಾಂದಾರರ ಭೂಮಿಗಳನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳುವುದರಲ್ಲಿ ಯಾರದೂ ಭಿನ್ನಾಭಿಪ್ರಾಯ ಅಥವಾ ಅಭ್ಯಂತರವಿದ್ದಹಾಗೆ ಕಾಣ ಲಿಲ್ಲ. ಆದರೆ ಕೆಲವು ಮಾನ್ಯ ಸದಸ್ಯರು ಈ ಸಭೆಯಲ್ಲಿ ಈ ಬಿಲ್ಲನ್ನು ವಿರೋಧಿಸಿದ್ದಾರೆ. ಆದರೆ ಅವರು ಹಾಗೆ ವಿರೋಧಿಸಿರುವುದರ ಉದ್ದೇಶವೇನೆಂದರೆ, ಈಗ ಈ ಬಿಲ್ಲು ಈ ಸಭೆಯಮುಂದೆ ಯಾವ ರೀತಿಯಲ್ಲಿ ಬಂದಿರುತ್ತ ದೆಯೋ ಆ ರೀತಿಯಲ್ಲಿ ಇದನ್ನು ಅಂಗೀಕರಿಸಲು ಸಾಧ್ಯ ವಿಲ್ಲ ಎಂಬ ಒಂದು ಕಾರಣದಿಂದ ಹಾಗೆ ವಿರೋಧಿಸಿದ್ದಾ ರೆಯೇ ಶಿವಾಯ ಅವರಿಗೂ ಕೂಡ ಈ ಜೋಡಿ, ಜಹಗೀರು ಗಳು ರದ್ದಾಗಬೇಕೆಂಬ ಅಭಿಪ್ರಾಯವಿರುತ ದೆಯೆಂದು ನಾನು ಭಾವಿಸಿದ್ದೇನೆ. ಆದರೆ ಈಗ ಈ ಬಿಲ್ಲಿನಮೇಲೆ ಚರ್ಚೆಯಾಗಿರುತಕ್ಕ ಅಂಶಗಳ ಜೊತೆಗೆ ಇನ್ನೂ ಏನೇನು ಅಂಶಗಳನ್ನು ಮುಂದೆ ತರತಕ್ಕ ಮಸೂದೆಯಲ್ಲಿ ಅಡಕ ಮಾಡಬೇಕಾಗಿರುತ್ತದೆಂಬ ವಿಚಾರದಲ್ಲಿ ನಾನೀಗ ನನ್ನ ಅಭಿಪ್ರಾಯಗಳನ್ನು ಸೂಚಿಸಲಿಚ್ಛಿಸುತ್ತೇನೆ.

ಒಂದನೆಯದಾಗಿ, ಇಲ್ಲಿಯವರೆಗೂ ಏನು ಒಬ್ಬ ವ್ಯಕ್ತಿ ಅವನು ಕಾನೂನು ಪ್ರಕಾರ ಎಷ್ಟು ಜಮೀನನ್ನು ಬೇಕಾದರೂ ಹೊಂದುವುದಕ್ಕೂ ಮತ್ತು ಅಂಥ ಜಮೀನನ್ನು ತನ್ನ ಅಧಿಕಾರದಲ್ಲಿಟ್ಟುಕೊಂಡು ಆತನು ಅನುಭವಿಸುವುದಕ್ಕೂ ಒಂದು ಹಕ್ಕನ್ನು ಪಡೆದಿದ್ದಾನೆ. ಇದೇ ರೀತಿ ಜೋಡಿದಾರರಿಗೂ ಮತ್ತು ಇನಾಂದಾರರಿಗೂ ಒಂದು ಹಕ್ಕು ಇದ್ದೇ ಇದೆ. ಈಗ ಈ ಮಸೂದೆಯಲ್ಲಿ ವ್ಯಕ್ತಪಡಿಸಿರತಕ್ಕ ಪ್ರಕಾರ ನಾವು ಈ ಮಸೂದೆಯ ಜೋಡಿ ದಾರರ ಮತ್ತು ಇನಾಂದಾರರ ಆಸ್ತಿಯಮೇಲಿರತಕ್ಕ ಹಕ್ಕನ್ನು ಹರಣಮಾಡುವ ಸಂದರ್ಭದಲ್ಲದ್ದೇವೆ. ಈಗ ಆಚರಣೆಯಲ್ಲಿರತಕ್ಕ ನಮ್ಮ ರಾಜ್ಯಾಂಗದ ವಿಧಿಗನು ಗುಣವಾಗಿ ಯಾರಾದರೂಬ್ಬ ಖಾಸಗಿ ಮನುಷ್ಯನಿಗೆ ಸೇರಿರತಕ್ಕಂಥ ಆಸ್ತಿಯನ್ನು ದೇಶಕ್ಕೆ ಅಥವಾ ಸಾರ್ವ ಜನಿಕರಿಗೆ ಒಂದು ಅನುಕೂಲ ಕಲ್ಪಿಸಬೇಕೆಂಬ ದೃಷ್ಟಿ ಯಿಂದ ಅತನ ಹಕ್ಕನ್ನು ತಪ್ಪಿಸಿ ತನ್ನು ಕೊಳ್ಳತಕ್ಕ ಸಂದರ್ಭದಲ್ಲಿ ಅಂಥ ಆಸ್ತಿಗೆ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕಾಗಿದ್ದಾಗ ಅದಕ್ಕೆ ಪರಿಹಾರ ಕೊಟ್ಟು ಅದನ್ನು ತೆಗೆದುಕೊಳ್ಳಬೇಕೆಂದು ಒಂದು ವಿಧಾಯಕ ಮಾಡಲಾಗಿದೆ. ಆದರೆ ತಾವೂ ಸಹ ಈ ಮಸೂದೆಯ ಈ ಬಿಲ್ಲನ್ನು ಇಡೀ ದೇಶದ ಹಿತಬಯಸುವುದಕ್ಕಾಗಿ ನಮ್ಮ ಮಂಡಿಸಿದ್ದರೆ ನಾನು ಇದನ್ನು ಸಂಪೂರ್ಣ ವಾಗಿ ಸ್ವಾಗತಿಸುತ್ತೇನೆ. ಈಗಾಗಲೆ ಅನೇಕ ಮಾನ್ಯ ಮಿತ್ರರು ಮಾತನಾಡುತ್ತಿರುವಾಗ ಅವರು ಸೂಚಿಸಿದ ಅಭಿಪ್ರಾಯಗಳ ಬಗ್ಗೆ ಶ್ರೀ ವಿ. ವೆಂಕಟಪ್ಪನವರು ಸೂಚಿ ಸಿರುವ ಪ್ರಕಾರ ಜೋಡಿ ಮತ್ತು ಇನಾಂದಾರರು ಗಳ ವಿಷಯದಲ್ಲಿ ಅಷ್ಟು ಲಘುವಾಗಿ ನಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸುವುದು ಸರಿಯಲ್ಲವೆ ದೇ ನನ್ನ ಭಾವನೆಯೂ ಕೂಡ. ಈ ಜೋಡೀದಾರರಿಗೂ ಮತ್ತು ಇನಾಂದಾರರಿಗೂ ಯಾವುದೋ ಒಂದು ಕಾಲದಲ್ಲಿ ಅವರು ಯಾವುದೋ ಒಂದು ಮಹತ್ತರವಾದ ಸೇವೆ ಯನ್ನು ದೇಶಕ್ಕೆ ಸಲ್ಲಿಸಿರುವುದರಿಂದ ಅವರಿಗೆ ಆ ಇನಾಂತಿಗಳನ್ನು ಕೊಡಲಾಗಿದೆಯೆ ೀ ಹೊರತು, ಯಾವುದೋ ಒಂದು ಕಾರಣಕ್ಕೆ, ಯಾವುದೋ ಒಂದು ಕಾಲದಲ್ಲಿ, ಯಾರೋ ಒಬ್ಬರು ಹಾಗೆ ಕೊಟ್ಟಿರತಕ್ಕಂಥ ಇನಾಂತಿಗಳಾಗಿರುತ್ತದೆಯೆಂದು ಅಷ್ಟು ಲಘುವಾಗಿ ಮಾತನಾಡತಕ್ಕದ್ದು ಸರಿಯಲ್ಲ. ಒಂದುವೇಳೆ ಅವರು ದೇಶದ ಹಿತದೃಷ್ಟಿಯಲ್ಲಿ ಅಷ್ಟು ಅನುಕೂಲವಾದ ಕೆಲಸ ಗಳನ್ನು ಅವರು ಮಾಡಲಿಲ್ಲವೆಂಬ ಒಂದು ಕಾರಣದ ಮೇಲೆ ಅವರನ್ನು ಅಲ್ಲಗಳೆಯುವುದು ಸರಿಯಲ್ಲ.

ಈ ಮಸೂದೆಯಲ್ಲಿ ರಿಲಿಜಿಯಸ್ ಎಂಡೋಮೆಂಟ್ ಗಳಿಗೂ ಮತ್ತು ಸರ್ವಿಸ್ ಇನಾಂಗಳಿಗೂ ವಿನಾಯಿತಿ ಯನ್ನು ಕೊಡಲಾಗಿದೆ. ಈ ವಿಚಾರವನ್ನೂ ಸಹ ತುಲನ ಮಾಡುತ್ತ ಅನೇಕ ಮಿತ್ರರು ಅವರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಶೃಂಗೇರಿ ಬಹಳ ಹಿಂದಿನಿಂದಲೂ ಬಂದಂಥ ಸಂಸ್ಥೆಯೆಂದೂ, ಅದಕ್ಕಾಗಿ ಈ ಸಂಸ್ಥೆಗೆ ಹಾಕಿಕೊಟ್ಟಿರುವ ಇನಾಂ ಜಮೀನುಗಳನ್ನೂ ಮತ್ತು ಇದೇ ರೀತಿ ಇನ್ನೂ ಅನೇಕ ಮಠಗಳಿಗೆ ಸಂಬಂಧಪಟ್ಟ ಜಮೀನುಗಳನ್ನೂ ಸದ್ಯಕ್ಕೆ ಮುಟ್ಟುಗೋಲು ಹಾಕಿ ಕೊಳ್ಳದೆ, ಅವುಗಳಿಗೊಂದು ವಿನಾಯಿತಿಯನ್ನು ತೋರಿಸ ಲಾಗಿದೆ. ಇವುಗಳ ವಿಚಾರವನ್ನು ಮುಂದಕ್ಕೆ ನೋಡೋಣವೆಂದು ಹೇಳಿದ್ದಾರೆ. ಹೀಗೆ ಮಾಡಿರುವುದು ಬಹಳ ಸೂಕ್ತವಾಗಿದೆ ಮತ್ತು ಮುಂದಾಲೋಚನೆ ಯಿಂದ ಕೂಡಿದುದಾಗಿದೆ. ಆದರೆ ಈಗಾಗಲೇ ಇಡೀ ಹಿಂದೂಸ್ತಾನದಲ್ಲಿ ಅನೇಕ ಪ್ರಾಂತಗಳಲ್ಲಿ ಈ ಭೂ ಸುಧಾರಣೆ ಜಾರಿಗೆ ಬಂದಿರುತ್ತದೆ. ಈ ಬಗ್ಗೆ ಅನೇಕ ಕಾನೂನುಗಳೂ ಈಗಾಗಲೇ ಜಾರಿಗೆ ಬಂದಿವೆ. ಮಧ್ಯ ಪ್ರದೇಶ, ಯುನೈಟೆಡ್ ಪ್ರಾವಿನ್ಸುಗಳಲ್ಲಿ ಈ ಜಮೀನ್ದಾರಿ ಪದ್ಧತಿಯನ್ನು ರದ್ದಿಯಾತಿಮಾಡತಕ್ಕ ಬಗ್ಗೆ ಒಂದು ಕಾನೂನನ್ನು ಜಾರಿಗೆ ತರಲಾಗಿದೆ. ಆದರೆ ಕಾಶ್ಮೀರದಲ್ಲೇ ಒಂದು ಉಗ್ರವಾದ ರೀತಿಯಲ್ಲಿ ಇದನ್ನು ಜಾರಿಗೆ ತರಲಾಗಿದೆ. ಕಾಶ್ಮೀರದಲ್ಲಿ ಮಾತ್ರ ಈ ಜಮೀನ್ದಾರಿ ಪದ್ಧತಿಯನ್ನು ಜಾರಿಗೆತರತಕ್ಕ ಸಂದರ್ಭದಲ್ಲಿ ಅವರಿಗೆ ಯಾವ ಕಾಂಪೆನ್‌ಸೇಷನ್ನನ್ನೂ